**ಸಿಸಿ ನಂಃ 2325/2025**

**ಪಿ. ಡಬ್ಲ್ಯು 1**

**(ಇಂದು ದಿನಾಂಕಃ 09-03-2026 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಮುಂದುವರಿದ ಪಾಟೀ ಸವಾಲುಃ-ಆರೋಪಿ ಪರ ವಕೀಲರಾದ ಶ್ರೀ ಎನ್. ಎಂ.ಎಂ ರವರಿಂದಃ**

4. ನಿಪಿ-6 ರಲ್ಲಿ ಸೀಲು ಹಾಕಿ For Manager ಅಂತಾ ಸಹಿ ಮಾಡಿದ್ದು ಸಹಿ ಮಾಡಿದವರ ಹೆಸರು ನಮೂದಿಸಿಲ್ಲ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಆಡಳಿತ ಮಂಡಳಿಯ ಅಧ್ಯಕ್ಷರ ಹಾಗೂ ಸದಸ್ಯರ ಸಹಿ ನಿಪಿ-6 ರಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿ ಇರುವುದಿಲ್ಲ ಆದರೆ ಅದು ಠರಾವಿನ ಯಥಾವತ್ತು ಪ್ರತಿ ಹೊರತು ಮೂಲ ಪ್ರತಿ ಅಲ್ಲ ಅಂತಾ ಉತ್ತರಿಸುತ್ತಾರೆ. ನಿಪಿ-6 ಹೊರತು ಪಡಿಸಿ ಮೂಲ ಠರಾವು ನಿಮ್ಮ ಸಂಘದಲ್ಲಿ ಇದೆಯಾ ಎಂದರೆ ಸಾಕ್ಷಿ ಇದೆ ಅಂತಾ ಉತ್ತರಿಸುತ್ತಾರೆ. ನಿಮ್ಮ ಪ್ರಕಾರ ಮೂಲ ಠರಾವಿನಲ್ಲಿ ಆಡಳಿತ ಮಂಡಳಿಯ ಅಧ್ಯಕ್ಷರ ಮತ್ತು ಸದಸ್ಯರ ಸಹಿ ಇದೆಯಾ ಎಂದರೆ ಸಾಕ್ಷಿ ಇದೆ ಅಂತಾ ಉತ್ತರಿಸುತ್ತಾರೆ. ಸದ್ರಿ ಠರಾವಿನ ಮೂಲ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಲು ನಿಮಗೆ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ತೊಂದರೆ ಇದೆ ಅಂತಾ ಉತ್ತರಿಸುತ್ತಾರೆ. ಅದನ್ನು ಹಾಜರು ಪಡಿಸಲು ಏಕೆ ಸಾಧ್ಯವಿಲ್ಲ ಎಂದರೆ ಸಾಕ್ಷಿ ಠರಾವು ಪುಸ್ತಕ ಒಂದೇ ಇರುವ ಕಾರಣ ಎಲ್ಲಾ ಕೇಸುಗಳಲ್ಲಿ ಅದನ್ನು ಹಾಜರುಪಡಿಸಲು ಆಗುವುದಿಲ್ಲ ಅಂತಾ ಉತ್ತರಿಸುತ್ತಾರೆ. ನಿಪಿ-6 ಮೂಲ ಠರಾವಿನ ಯಥಾಪ್ರತಿ ಆಗಿರುವುದಿಲ್ಲ ಹಾಗೂ ಅದು ಸಂಘದ ಲೆಟರ್ ಹೆಡ್ ಮೇಲೆ ಪ್ರತ್ಯೇಕ ಮುದ್ರಿಸಿ ಮಾಡಿರುವ ಪ್ರತಿ ಎಂದರೆ ಸುಳ್ಳು. ಸಾಕ್ಷಿ ಮುಂದುವರಿದು ಅದು ಮೂಲ ಠರಾವಿನ ಜೆರಾಕ್ಸ ಪ್ರತಿ ಅಲ್ಲ Extracted copy ಅಂತಾ ಉತ್ತರಿಸುತ್ತಾರೆ. ಮೂಲ ದಾಖಲೆಯ ಯಥಾವತ್ತಾದ ಪ್ರತಿಯು Extracted copy ಆಗುತ್ತದೆ ಎಂದರೆ ಸಾಕ್ಷಿ ಮೂಲ ಠರಾವಿನ ವಿಷಯವನ್ನು ನಿಪಿ-6 ರಲ್ಲಿ ನಮೂದಿಸಲಾಗಿದೆ ಅಂತಾ ಉತ್ತರಿಸುತ್ತಾರೆ. ನಿಪಿ-6 ಮೂಲ ಠರಾವಿನ ಯಥಾಪ್ರತಿ ಅಲ್ಲ ಎಂದರೆ ಸರಿ.

5. ನಿಪಿ-7 ರಲ್ಲೂ ಸಹ ಸಂಘದ ಆಡಳಿತ ಮಂಡಳಿಯ ಅಧ್ಯಕ್ಷರ ಹಾಗೂ ಸದಸ್ಯರ ಸಹಿ ವಗೈರೆ ಇರುವುದಿಲ್ಲ ಎಂದರೆ ಸರಿ.

6. ನಿಪಿ-15 ರಲ್ಲಿ ದಿನಾಂಕ 15-04-2024 ರ ದಿನಾಂಕ ನಮೂದಾಗಿದೆಯಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ನಿಪಿ-15 ರ ಸ್ಟೇಟಮೆಂಟು ದಿನಾಂಕ

**ಸಿಸಿ ನಂಃ 2325/2025**

**ಪಿ. ಡಬ್ಲ್ಯು 1**

29-06-2020 ರಿಂದ 17-10-2025 ವರೆಗೆ ಇರುವುದರಿಂದ ದಿನಾಂಕ 15-04-2024 ನಿಪಿ-15 ರಲ್ಲಿ ಒಳಗೊಂಡಿದೆ ಅಂತಾ ಉತ್ತರಿಸುತ್ತಾರೆ. ನಿಪಿ-15 ರಲ್ಲಿ ದಿನಾಂಕ 15-04-2024 ರ ನಮೂದು ಹೊರತುಪಡಿಸಿ ಬೇರೆ ಬೇರೆ ತಾರೀಖಿನ ನಮೂದುಗಳು ಕಂಡು ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ದಿನಾಂಕ 15-04-2024 ರಂದು ಯಾವುದೇ ನಿರ್ದಿಷ್ಟ ವ್ಯವಹಾರ ಆಗದೇ ಇರುವುದರಿಂದ ಆ ದಿನದಂದು ಯಾವುದೇ ನಮೂದು ಅದರಲ್ಲಿ ಕಂಡು ಬರುವುದಿಲ್ಲ ಅಂತಾ ಉತ್ತರಿಸುತ್ತಾರೆ. ರೂ.1,66,735/-ಬಾಕಿ ಹಣ ನಿಪಿ-15 ರಲ್ಲಿ ನಮೂದು ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ಕಂಡು ಬರುತ್ತದೆ ಅಂತಾ ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ಸದ್ರಿ ಮೊತ್ತದ ಬಾಕಿ ನಿಪಿ-15 ರಲ್ಲಿ ಕಂಡು ಬರುವುದಿಲ್ಲ ಅಂತಾ ಉತ್ತರಿಸುತ್ತಾರೆ. ನಿಪಿ-15 ರಲ್ಲಿ ರೂ.1,77,433/- ಎಂಬುದು ಕಂಡು ಬರುತ್ತದೆ ಎಂದರೆ ಸರಿ. ನಿಪಿ-15 ರ ಸ್ಟೇಟಮೆಂಟು ನಿಪಿ-1 ರ ಚೆಕ್ಕಿನಲ್ಲಿ ಕಾಣಿಸಿದ ಮೊಬಲಗಿನ ಹಣಕ್ಕೆ ಸಂಬಂಧಿಸಿದ ಸ್ಟೇಟಮೆಂಟು ಆಗಿರುವುದಿಲ್ಲ ಎಂದರೆ ಸುಳ್ಳು. ನಿಪಿ-15 ನಿಮ್ಮ ಕಚೇರಿಯಲ್ಲಿ ತಯಾರಿಸಿಕೊಂಡ ಸ್ಟೇಟಮೆಂಟು ಹಾಗೂ ಈ ಚೆಕ್ಕಿನ ಪ್ರಕರಣಕ್ಕೂ ಅದಕ್ಕೂ ಯಾವುದೇ ಸಂಬಂಧ ಇರುವುದಿಲ್ಲ  ಎಂದರೆ ಸರಿಯಲ್ಲ. ನಿಪಿ-15 ಕ್ಕೆ ಸಹಿ ಮಾಡಿರುವ ವ್ಯಕ್ತಿ ನಿಮ್ಮ ಸಂಘದ ಅಧಿಕೃತ ವ್ಯಕ್ತಿ ಅಲ್ಲ ಎಂದರೆ ಸರಿಯಲ್ಲ.

7. ಆರೋಪಿ ನಿಮ್ಮ ಸಂಘಕ್ಕೆ ರೂ.1,66,735/- ನ್ನು ಯಾವತ್ತು ಕೊಡುವುದು ಬಾಕಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕಿನಲ್ಲಿ ಇರುವ ಸಹಿ ಆರೋಪಿಯದ್ದಲ್ಲ ಹಾಗೂ ಅದನ್ನು ನೀವೇ ಫೋರ್ಜರಿ ಮಾಡಿರುವುದು ಎಂದರೆ ಸರಿಯಲ್ಲ.

8. ಸ್ಟೇಟ ಬ್ಯಾಂಕ್ ಆಫ್ ಇಂಡಿಯಾ, ಚಿತ್ತಾಕುಲ(ಸದಾಶಿವಗಡ) ಶಾಖೆಯವರು ನಿಪಿ-2 ರಲ್ಲಿ ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇದೆಯೋ ಇಲ್ಲವೋ ಎಂಬುದನ್ನು ನಮೂದು ಮಾಡಿಲ್ಲ ಎಂದರೆ ಸಾಕ್ಷಿ 'Inactive account' ಅಂತಾ ನಮೂದಿಸಿದ್ದಾರೆ ಅಂತಾ ಉತ್ತರಿಸುತ್ತಾರೆ.

9. ನಿಪಿ-15 ಆರೋಪಿಗೆ ಸಂಬಂಧಿಸಿದ ಸ್ಟೇಟಮೆಂಟು ಆಗಿರುವುದಿಲ್ಲ ಹಾಗೂ ಆರೋಪಿಗೆ ಸಂಬಂದಿಸಿದ ಸ್ಟೇಟಮೆಂಟನ್ನು ಹಾಜರುಪಡಿಸದೇ ಇರುವುದರಿಂದ ಈ ಪ್ರಕರಣವು ನಿಲ್ಲುವುದಿಲ್ಲ ಎಂದರೆ ಸರಿಯಲ್ಲ.

ಸಿಸಿ ನಂಃ 2325/2025

**ಪಿ. ಡಬ್ಲ್ಯು 1**

ಆರೋಪಿ ನಿಮ್ಮ ಸಂಘಕ್ಕೆ ಕಾನೂನು ಸಮ್ಮತವಾಗಿ ಕೊಡಬೇಕಾದ ಯಾವುದೇ ಹಣ ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ.

10.ನಿಮ್ಮ ಸಂಘದವರು ಜನ ಸಾಮಾನ್ಯರ ಮೇಲೆ ಬಹಳಷ್ಟು ಪ್ರಕರಣ ದಾಖಲಿಸುವುದು ಹಾಗೂ ನೋಟಿಸು ಕೊಡುವುದು ಮಾಡುತ್ತಿದ್ದು ನಿಪಿ-1ರಲ್ಲಿ ಕಾಣಿಸಿರುವ ಹಣ ಆರೋಪಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಿಮಗಾಗಲೀ, ನಿಪಿ-6 ಮತ್ತು 7 ರಲ್ಲಿ ಸಹಿ ಮಾಡಿದ ವ್ಯಕ್ತಿಗಾಗಲೀ ಈ ಪ್ರಕರಣವನ್ನು ದಾಖಲಿಸಿ ನಡೆಸಿಕೊಂಡು ಹೋಗಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಕಾರವಾರ.**